**3. ಸಭೆಯ ಮುಂದಿಡಲಾದ ಕಾಗದ ಪತ್ರಗಳು :**

**ಶ್ರೀ ಉಮೇಶ್ ವಿ.ಕತ್ತಿ (ತೋಟಗಾರಿಕೆ ಸಚಿವರು)** : ಮಾನ್ಯ ಅಧ್ಯಕ್ಷರೆ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧ್ಯಾದೇಶ, 2010 ಸಂಖ್ಯೆ:ಸಂವ್ಯಶಾಇ–47 ಶಾಸನ 2009, ದಿನಾಂಕ: 11ನೇ ಫೆಬ್ರವರಿ, 2010 ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಅಧ್ಯಕ್ಷರು** : ಮಂಡಿಸಲಾಯಿತು.

**ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ)** : ಮಾನ್ಯ ಅಧ್ಯಕ್ಷರೆ, 2010–2014ನೇ ಸಾಲಿನ ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಸದನದಲ್ಲಿ ಮಂಡಿಸುತ್ತೇನೆ.

**ಅಧ್ಯಕ್ಷರು** : ಮಂಡಿಸಲಾಯಿತು.

**4. ನಿಯಮ 60 ರಡಿ ನಿಲುವಳಿ ಸೂಚನೆ ಮೇರೆಗೆ ಪ್ರಸ್ತಾಪಿಸಲು ಅನುಮತಿ ಕೋರಿಕೆ**

**ವಿಷಯ : (1) ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿಯು ಭೂಮಿ ಪರಿಹಾರ ನೀಡುವಲ್ಲಿ ಅಧಿಕಾರಿಗಳು ಹಾಗೂ ರಾಜಕೀಯ ಪಟ್ಟ ಭದ್ರ ಹಿತಾಶಕ್ತಿ ವ್ಯಕ್ತಿಗಳು ಸೇರಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತಿರುವ ಬಗ್ಗೆ**

**ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ)** : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪ್ರದೇಶ ಕೈಗಾರಿಕೆ ಮಂಡಲಿಯಲ್ಲಿ ಸುಮಾರು 1,17,000 ಎಕರೆ ಜಮೀನನ್ನು ಸನ್ಮಾನ್ಯ ಕೈಗಾರಿಕೆ ಮಂತ್ರಿಗಳು ಈ ರಾಜ್ಯದಲ್ಲಿರುವ 20,000 ವಿದ್ಯಾರ್ಥಿಗಳ ಸಲುವಾಗಿ ಜಮೀನನ್ನು ಭೂಸ್ವಾಧೀನ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅದರಲ್ಲಿ ಉದಾಹರಣೆಗೆ ಹೇಳುವುದಾದರೆ ಒಂದು ಕಡೆ ಭೂಸ್ವಾಧೀನ ಮಾಡುವುದು ಇನ್ನೊಂದು ಕಡೆ ಮಧ್ಯವರ್ತಿಗಳ ಕಡೆಯಿಂದಲೋ ಅಥವಾ ಯಾರ ಕಡೆಯಿಂದಲೋ ಭೂಸ್ವಾಧೀನವನ್ನು ಕೈಬಿಡುವಂಥ ಕಾರ್ಯಕ್ರಮವನ್ನು ಮಾಡುವುದು. ಇದಕ್ಕೆ ಎರಡು ಉದಾಹರಣೆಯನ್ನು ನಾನು ಕೊಡುತ್ತೇನೆ. ಸುಮಾರು 2010 ರಲ್ಲಿ Notification No.1, ಸಂಖ್ಯೆ:ಸಿಎ 170 ಬೆಂಗಳೂರು, ಜನವರಿ 2010.